ಶಕುನಗಳ ಪಾತ್ರವು ಇದೆ. ಕೋಳಿ ಅಂಕಕ್ಕೆ ತೆರಳುವಾಗ ವ್ಯಕ್ತಿಗಳ ದೃಷ್ಟಿ, ನಾಗರಹಾವು, ಮುಟ್ಟಾದ ಮಹಿಳೆ, ವಿಧವೆ, ವಿಧುರ – ಈ ತರಹದ ಶಕುನಗಳು ಎದುರಾದರೆ ಸೋಲು ಖಚಿತ ಎಂದೇ ನಂಬುತ್ತಾರೆ. ಈ ರೀತಿಯ ಅಶುಭಗಳು ಎದುರಾದಾಗ ಯಾರೂ ಕೋಳಿಯನ್ನು ಕಟ್ಟುವುದಿಲ್ಲ. ಅಂಕಕ್ಕೆ ಹೊರಟವರ ಎದುರಿಗೆ ಕೇರೆಹಾವು, ಮಕ್ಕಳು, ವಿವಾಹಿತರು ಕಂಡರೆ ಶುಭವೆಂಬ ನಂಬಿಕೆ ಇದೆ. ಕೋಳಿಯನ್ನು ಕೇಂದ್ರವಾಗಿಟ್ಟುಕೊಂಡು ಹುಟ್ಟಿದ ಶಕುನವಾಗಲಿ ಪಂಚಾಂಗವಾಗಲಿ ಬೇರೆ ಯಾವ ಪ್ರಾಣಿಗೆ ಇದೆ ಹೇಳಿ ನೋಡೋಣ. ಕೋಳಿ ಬೇರೆಲ್ಲ ಜೀವಸಮೂಹಕ್ಕಿಂತ ಭಿನ್ನವೆಂದು ಈಗಲಾದರೂ ವಾಚಕರಿಗೆ ಸ್ವಲ್ಪವಾದರೂ ಮನವರಿಕೆಯಾಗಿರಬೇಕು.

> ಐಪಿಎಲ್ ಮಾಲೀಕರು ತಮ್ಮ ತಂಡಕ್ಕೆ ಅಗತ್ಯವಾದ ಆಟಗಾರರನ್ನು ಕೋಚ್‌ಗಳ ಸಲಹೆಯನುಸಾರ ಆಯ್ದುಕೊಳ್ಳುತ್ತಾರೊ, ಹಾಗೆ ಈ ಸಂತೆಯಲ್ಲಿಯೂ ಕೋಳಿ ಅಂಕದ ಪರಿಣತರ ಮಾತಿನ ಅನುಸಾರವೇ ಮಾಲೀಕ ಕೋಳಿಯನ್ನು ಖರೀದಿಸುತ್ತಾನೆ.

ಜಕಣಿ ಮಾರಿ ಮಸಣಿಯಂತಹ ದೈವಗಳ ಮುನಿಸು ಶಮನಗೊಳಿಸಲು ಕೋಳಿಯ ಬಲಿ ಅಗತ್ಯವಿರುವುದು ನಿಮಗೆಲ್ಲ ತಿಳಿದ ಸಂಗತಿ. ಆದರೆ ಕೋಳಿಗಾಗಿಯೇ ತನ್ನ ಬದುಕನ್ನು ಬಲಿಕೊಟ್ಟವರ ಕತೆ ನಿಮಗೆ ತಿಳಿದಿರಲಿಕ್ಕಿಲ್ಲ. ಕಡಲಾಚೆಗಿನ ಅರಬರ ರಾಷ್ಟ್ರಗಳತ್ತ ದುಡಿಮೆಗಾಗಿ ವಲಸೆ ಹಕ್ಕಿಗಳಾಗಿ ಹಾರುವುದು ಕರಾವಳಿಯಲ್ಲಿ ಸಾಮಾನ್ಯ. ಈ ಹಕ್ಕಿಗಳು ಸ್ವರಾಷ್ಟ್ರದತ್ತ ಮುಖಮಾಡುವುದು ವರ್ಷಕ್ಕೊ ಎರಡು ವರ್ಷಕ್ಕೊ ಒಮ್ಮೆ. ಹೀಗೆ ಊರಿಗೆ ಬರುವ ಹಕ್ಕಿಗಳಿಗೆ ಊರಿನ ಜಾತ್ರೆ, ಮನೆಯಲ್ಲಿನ ಶುಭಕಾರ್ಯಗಳು ನೆಪವಾಗುತ್ತವೆ. ಹೀಗೆ ವಿದೇಶದಿಂದ ಬಂದ ವ್ಯಕ್ತಿ, ಅವನ ಹೆಸರು ಸದ್ಯಕ್ಕೆ ಆಕಾಶ ಎಂದಿರಲಿ. ಊರಿಗೆ ಬಂದ ಆಕಾಶನಿಗೆ ಮದುವೆ ಮಾಡಿಯೇ ಕಳುಹಿಸಲು ಮನೆಯವರು ಸಿದ್ಧರಾಗಿದ್ದರು. ಹುಡುಗ ಹರಕೆಗೆ ತಂದ ಕುರಿಯಂತೆ ಸಮ್ಮತಿಯಿತ್ತ ಎಂದರೆ ಉತ್ಪ್ರೇಕ್ಷೆಯಾದೀತು. ಅವನ ಇಚ್ಛೆಗೆ ಅಲ್ಲಿ ಅವಕಾಶವೇ ಇರಲಿಲ್ಲ. ಮದುವೆಯ ತಯಾರಿಯ ಜವಾಬ್ದಾರಿಯನ್ನು ಮನೆಯವರೇ ಹೊತ್ತಿದ್ದರಿಂದ ಬೇರೆ ಕೆಲಸವಿರಲಿಲ್ಲ. ತನ್ನ ಗೆಳೆಯರೆಲ್ಲ ಊರಿನ ಸಮೀಪದ ಕೋಳಿ ಅಂಕಕ್ಕೆ ತೆರಳುವ ವಿಚಾರ ತಿಳಿಯಿತು. ಅಂಕದ ಆಕರ್ಷಣೆ ರಕ್ತಗತವಾಗಿರುವಾಗ ಹೋಗದಿರಲು ಸಾಧ್ಯವೇ ಇರಲಿಲ್ಲ. ತಾನೂ ಹೊರಟ. ವಿಶಾಲವಾದ ಗೇರುಮರದ ಹಾಡಿ ಅದರ ಅಂಚಿಗೆ ಎತ್ತರದ ಕಾಂಪೌಂಡ್. ಕೋಳಿ ಕಾಳಗದ ಸುತ್ತ ನೆರೆದ ಗುಂಪು ತಲ್ಲೀನವಾಗಿರುವಾಗಲೇ, ಜೇನುನೊಣ ಮುತ್ತಿದಂತೆ ಬೆನ್ನಟ್ಟಿಬಂದ ಪೊಲೀಸ್ ಲಾಟಿಸದ್ದಿಗೆ ಕಾಲಿಗೆ ಬುದ್ಧಿಹೇಳಿದರು. ಒಂದು ವೇಳೆ ದಾಳಿಯಾದರೆ ಹೇಗೆ ತಪ್ಪಿಸಿಕೊಳ್ಳಬಹುದು ಎಂದಾಲೋಚಿಸಿದವರು ಸುಲಭವಾಗಿ ಪಾರಾದರು. ಪಾರಾಗುವ ದಾರಿ ಯೋಚಿಸದ ಆಕಾಶ ಆಳೆತ್ತರದ ಪಾಗಾರ ಹಾರಿದ. ಹಾರಿದವನು ನೇರವಾಗಿ ಮಳೆಗಾಲದಲ್ಲಿ ಹರಿದು ಈಗ ಖಾಲಿಯಾದ ತೋಡೊಳಗೆ ಬಿದ್ದವನಿಗೆ ಮೇಲೇಳಲಾಗಲಿಲ್ಲ. ಅನಂತರ ಸೊಂಟ ಮುರಿದುಕೊಂಡು ಆರು ತಿಂಗಳು ಹಾಸಿಗೆ ಹಿಡಿದ. ಮದುವೆ ನಿಂತು ಹೋಯಿತು ಎಂದು ಬೇರೆ ಹೇಳಬೇಕಿಲ್ಲವಲ್ಲ? ವಿದೇಶದ ಉದ್ಯೋಗಕ್ಕೂ ಕುತ್ತು ಬಂತು. ಕೋಳಿ ಕಾರಣಕ್ಕಾಗಿ ಇಷ್ಟೆಲ್ಲ ತೊಂದರೆಯಾದರೂ ಅದರ ಮೋಹ